

# ಕಾಡು ಹೂಗಳ ಮಾಯಾವಿಲಾಸ



■ ಚಿತ್ರ–ಲೇಖನ:
**ಶಾಂತಾರಾಮ ತಾರಗೋಡ**

ಹಾವಾದ ಹೂವ್ರೋ, ಉದ್ದನೆ ಕತ್ತಿನ ಕೊಕ್ಕರೆಯ ಒಲವಿನ ಜೋಡಿಯೊ, ಪ್ರೇಮ ಲಾಸ್ಯವ್ರೋ, ಹಕ್ಕಿಗಳ ಚಿಲಿಪಿಲಿ ಹಾರಾಟವ್ರೋ, ಬಿಲದೊಳಗೆ ಇಣುಕಿದ ಇಲಿ ಬಾಲದ ನೋಟವ್ರೋ... ಒಂದಕ್ಕಿಂತ ಒಂದು ಮಿಗಿಲಾದ ಚೆಂದ.

ಅವೆಲ್ಲ ಅಂದಗಳು ಹಳ್ಳಿ ಮನೆಗಳ ಅಕ್ಕ ಪಕ್ಕದ ಗಿಡಗಂಟಿಗಳಲ್ಲಿ ಕಂಡು ಬಂದ ಅಪರೂಪದ ದೃಶ್ಯ. ಕಾಡು ಗಿಡಗಳು ಕೇವಲ ಕುಡುಗೋಲಿಗೆ ಕಡಿದು ಬಯಲಾಗುವುದಕ್ಕಷ್ಟೇ ಅಲ್ಲ ಎಂಬುದರ ಸತ್ಯದ ಅರಿವು ಇದರಿಂದ ಮೂಡುವುದು ಸಹಜ. ಇವನ್ನು ನೋಡಿ ಸವಿಯುವ ಸೌಂದರ್ಯ ಪ್ರಜ್ಞೆಯೊಂದಿದ್ದರೆ ಸಾಕು. ಒಂದು ನಿರ್ದಿಷ್ಟ ಕಾಲದೊಳಗೆ ಕಾಣಿಸಿ ಮಾಯವಾಗುವ ಇಂಥಹ ಹಲವಾರು ಸುಂದರಾಂಗಿಯರ ಮೇಲೆ ಒಮ್ಮೆಯಾದರೂ ಕ್ಯಾಮರಾ ಲೊಚಗುಟ್ಟದೆ ಇದ್ದೀತೆ? (8ನೇ ಪುಟ ನೋಡಿ)